ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡ

1609(1872); ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ (ನಿಪ್ಪಾಣಿ)

ಅ) ಚಿಕ್ಕೋಡಿ ತಾಲ್ಲೂಕಿನ ನಿಪ್ಪಾಣಿಯಲ್ಲಿ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಮುರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿನ ಅವ್ಯವಸ್ಥೆಯಿಂದ ವಿದ್ಯಾರ್ಥಿಗಳು ದೈನಂದಿನ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಪರ್ಯಾಯವಾಗಿ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ;

ಆ) ನಿಪ್ಪಾಣಿ ಮತ ಕ್ಷೇತ್ರದ ವ್ಯಾಪ್ತಿಯ ಗವಾನ ಗ್ರಾಮದ ಸರ್ಕಾರಿ ಸ್ವಾಮ್ಯದ ಸರ್ವೆ ನಂ:40/1 ರಲ್ಲಿ 6 ಎಕರೆಯಷ್ಟು ಕ್ಷೇತ್ರವು ಮೊರಾರ್ಜಿ ದೇಸಾಯಿ ವಸತಿ ಶಾಲೆಯ ನಿರ್ಮಾಣಕ್ಕೆ ಇಲಾಖೆಗೆ ಹಸ್ತಾಂತರವಾಗಿ, ಕಟ್ಟಡ ನಿರ್ಮಾಣಕ್ಕೆ 10.22 ಕೋಟಿ ರೂಪಾಯಿಗಳ ಪ್ರಸ್ತಾವನೆಯು ಸಲ್ಲಿಕೆಯಾಗಿ ಒಂದು ವರ್ಷ ಗತಿಸಿದರೂ ಕೂಡ ಯಾವ ಕಾರಣಕ್ಕೆ ಆಡಳಿತಾತ್ಮಕ/ಆರ್ಥಿಕ ಅನುಮೋದನೆ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಆಡಳಿತಾತ್ಮಕ ಅನುಮೋದನೆ ನೀಡುವಲ್ಲಿ ಏನಾದರೂ ಗೊಂದಲಗಳಿವೆಯೇ; ಅನುದಾನ ಒದಗಿಸುವಲ್ಲಿ ಸರ್ಕಾರದಲ್ಲಿ ಅನುದಾನದ ಕೊರತೆ ಇದೆಯೇ;

ಈ) ಅನುದಾನದ ಕೊರತೆ ಇಲ್ಲವಾದಲ್ಲಿ ಇನ್ನೂ ಎಷ್ಟು ದಿನಗಳಲ್ಲಿ ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ನೀಡಬಹುದಾಗಿದೆ;

ಉ) ನಿಪ್ಪಾಣಿ ಮತಕ್ಷೇತ್ರದಲ್ಲಿ ರಾಣಿ ಚೆನ್ನಮ್ಮ ವಸತಿ ಶಾಲೆ, ಮುರಾರ್ಜಿ ದೇಸಾಯಿ ವಸತಿ ಶಾಲೆ, ಏಕಲವ್ಯ ಮಾದರಿ ವಸತಿ ಶಾಲೆ, ಆದರ್ಶ ಮಾದರಿ ವಸತಿ ಶಾಲೆಗಳನ್ನು ಆರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಪ್ರಸ್ತಾವನೆಗಳನ್ನು ಯಾರು ಸಲ್ಲಿಸಿದ್ದಾರೆ; ಯಾವ ಯಾವ ಗ್ರಾಮಗಳಲ್ಲಿ ಯಾವ ಶಾಲೆಗಳಿಗಾಗಿ ಪ್ರಸ್ತಾವನೆಗಳಿವೆ;

ಅವುಗಳನ್ನು ಮಂಜೂರಾತಿ ಮಾಡುವ ಯೋಜನೆಯು ಸರ್ಕಾರಕ್ಕಿದೆಯೇ; ಇದ್ದಲ್ಲಿ ಯಾವಾಗ ಮಾಡಲಾಗುವುದು?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಸಚಿವರು)

ಅ) ಗಮನಕ್ಕೆ ಬಂದಿದೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಆ) ಗವಾನ ಗ್ರಾಮದಲ್ಲಿ ಹಿಂದುಳಿದ ವರ್ಗದ ಮುರಾರ್ಜಿ ದೇಸಾಯಿ ವಸತಿ ಶಾಲೆ ನಿರ್ಮಾಣ ಮಾಡಲು ಅಂದಾಜು ಪಟ್ಟಿಗೆ ಅನುದಾನ ಲಭ್ಯತೆಗನುಗುಣವಾಗಿ ಅನುಮೋದನೆ ನೀಡಲಾಗುವುದು.

ಇ) ಅಂದಾಜು ಪಟ್ಟಿಯನ್ನು ಪರಿಶೀಲಿಸಿ, ಆಡಳಿತಾತ್ಮಕ ಅನುಮೋದನೆ ನೀಡಲಾಗುವುದು.

ಈ) ಪರಿಶೀಲಿಸಿ ಮುಂದಿನ ಕ್ರಮ ವಹಿಸಲಾಗುವುದು.

ಉ) ನಿಪ್ಪಾಣಿ ಮತಕ್ಷೇತ್ರದ ಮಾನ್ಯ ಶಾಸಕರು ಈ ಕೆಳಕಂಡ ಗ್ರಾಮಗಳಿಗೆ ಪಟ್ಟಿಯಲ್ಲಿ ನೀಡಿರುವ ವಸತಿ ಶಾಲೆಗಳನ್ನು ಮಂಜೂರು ಮಾಡಲು ಪ್ರಸ್ತಾಪಿಸಿರುತ್ತಾರೆ.

ಕ್ರ.ಸಂ.	ಗ್ರಾಮದ ಹೆಸರು	ವಸತಿ ಶಾಲೆಯ ವಿವರ
1	ನಿಪ್ಪಾಣಿ	ರಾಣಿ ಚೆನ್ನಮ್ಮ ವಸತಿ ನಿಲಯ (ಹಿಂ.ವರ್ಗ)
2	ಲಖಿನಾಪೂರ	ಏಕಲವ್ಯ ಮಾದರಿ ವಸತಿ ಶಾಲೆ
3	ಹಂಚಿನಾಳ	ಮೊರಾರ್ಜಿ ದೇಸಾಯಿ ವಸತಿ ಶಾಲೆ
4	ಮಾಂಗೂರ	ಮೊರಾರ್ಜಿ ದೇಸಾಯಿ ವಸತಿ ಶಾಲೆ

ಹಂಚಿನಾಳ ಗ್ರಾಮಕ್ಕೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಮಂಜೂರು ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದ್ದು, ಅನುದಾನದ ಲಭ್ಯತೆ, ಶಾಲಾ ಸಂಕೀರ್ಣ ನಿರ್ಮಾಣ ಮಾಡಲು ಜಮೀನು ಮಂಜೂರಾತಿ ಮತ್ತು ಇತರೆ ಅಗತ್ಯಗಳ ಬಗ್ಗೆ ಪರಿಶೀಲಿಸಿ ಮುಂದಿನ ಕ್ರಮವಹಿಸಲಾಗುವುದು.

ಪಡಿತರ ಚೀಟಿ

1610(1873); ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ (ನಿಪ್ಪಾಣಿ)

ಅ) ಚಿಕ್ಕೋಡಿ ತಾಲ್ಲೂಕಿನ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿರುವ ಮನೆಗಳ ಸಂಖ್ಯೆ ಹಾಗೂ ಕುಟುಂಬಗಳ ಸಂಖ್ಯೆ ಎಷ್ಟು (ಗ್ರಾಮವಾರು ಮಾಹಿತಿ ನೀಡುವುದು)

ಆ) ಚಿಕ್ಕೋಡಿ ತಾಲ್ಲೂಕಿನ ವ್ಯಾಪ್ತಿಯಲ್ಲಿರುವ ಗ್ರಾಮಗಳಲ್ಲಿ ವಿವಿಧ ಬಗೆಯ ಪಡಿತರ ಚೀಟಿಯನ್ನು ಹೊಂದಿರುವ ಕುಟುಂಬಗಳ ಸಂಖ್ಯೆ ಎಷ್ಟು; ಬಾಕಿ ಉಳಿದ ಕುಟುಂಬಗಳಿಗೆ ಯಾವಾಗ ಪಡಿತರ ಚೀಟಿಯನ್ನು ಹಂಚಲಾಗುವುದು; (ವಿಧಾನ ಸಭಾ ಮತಕ್ಷೇತ್ರದ ಗ್ರಾಮವಾರು ಮಾಹಿತಿ ನೀಡುವುದು);

ಇ) ಹೊಸ ಪಡಿತರ ಚೀಟಿ ಹಾಗೂ ಮುದ್ರಿತಗೊಂಡಿರುವ ಪಡಿತರ ಚೀಟಿಗಳನ್ನು ನಿಗದಿತವಾಗಿ ಹಂಚದೇ ಇರುವುದರಿಂದ ಬಹಳಷ್ಟು ಕುಟುಂಬಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮವೇನು;

ಈ) ತಾಲ್ಲೂಕಿನ ವ್ಯಾಪ್ತಿಯಲ್ಲಿರುವ ನ್ಯಾಯಬೆಲೆ ಅಂಗಡಿಗಳಿಗೆ ಪ್ರತ್ಯೇಕವಾಗಿ ಯಾವ ಪಡಿತರವು ಎಷ್ಟು ಮಂಜೂರಾತಿ ಇದೆ; ಸರ್ಕಾರದಿಂದ ಆಗುವ ಹಂಚಿಕೆ ಎಷ್ಟು; ಎಷ್ಟು ವಿತರಣೆಯಾಗುವುದು; (ಗ್ರಾಮವಾರು/ನ್ಯಾಯಬೆಲೆ ಅಂಗಡಿವಾರು ಮಾಹಿತಿ ನೀಡುವುದು)?